ಓ ಎಸ್ ನಂ. 162/2018

ಪಿ ಡಬ್ಲ್ಯೂ-2

ಸಾಕ್ಷಿದಾರರನ್ನು ಕರೆಯಿಸಿ, ಪ್ರಮಾಣವಚನ ಬೋಧಿಸಲಾಯಿತು.

ದಿಃ 31.05.2023

**ಪಾಟೀ ಸವಾಲುಃ- ಶ್ರೀ ಡಿ ಆರ್ ಎನ್ 1, 3 ಮತ್ತು 4 ನೇ ಪ್ರತಿವಾದಿಯರ ಪರ ವಕೀಲರಿಂದ .**

ನಾನು ಬಿ ಬಿ ಎಂ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ನನ್ನ ತಾತ ಬೊಮ್ಮೆಗೌಡ ಮತ್ತು ಅಜ್ಜಿ ಬೋರಮ್ಮ ಅವರಿಗೆ 4 ಜನ ಮಕ್ಕಳು ಎಂದರೆ ಸರಿ. ಅವರೆಂದರೆ ಕೃಷ್ಣೇಗೌಡ, ಕೇಶವಮೂರ್ತಿ, ನಂಜಮ್ಮ ಮತ್ತು ದೇವರಾಜು. ನನ್ನ ತಾತ ಬೊಮ್ಮೇಗೌಡರವರು ನಾನು ಹುಟ್ಟುವ ಪೂರ್ವದಲ್ಲಿ ತೀರಿಕೊಂಡಿರುತ್ತಾರೆ. ನನ್ನ ಜನನ ದಿನಾಂಕ 26.05.1995 ಇರುತ್ತದೆ. ನನ್ನ ಅಜ್ಜಿ ಬೋರಮ್ಮರವರು ಮೃತಪಟ್ಟು 25 ವರ್ಷಗಳಾಗಿರುತ್ತವೆ. ಕೃಷ್ಣೇಗೌಡ ಮತ್ತು ಕೇಶವಮೂರ್ತಿ ನನ್ನ ದೊಡ್ಡಪ್ಪಂದಿರು ಎಂದರೆ ಸರಿ. ನನ್ನ ತಂದೆ ಮತ್ತು ನನ್ನ ದೊಡ್ಡಪ್ಪಂದಿರು ಸುಮಾರು 25 ವರ್ಷಗಳಿಂದ ಪ್ರತ್ಯೇಕವಾಗಿ ವಾಸವಿದ್ದಾರೆ. ರೇಷನ್ ಕಾರ್ಡ್ ಪ್ರತ್ಯೇಕವಾಗಿ ಮಾಡಿಸಿಕೊಂಡಿದ್ದೇವೆ. ನನ್ನ ತಂದೆಯೇ ನಮ್ಮ ವಿದ್ಯಾಭ್ಯಾಸವನ್ನು ನೋಡಿಕೊಂಡಿದ್ದರು ಎಂದರೆ ಸರಿ. ಕೃಷ್ಣೇಗೌಡರವರ ಕುಟುಂಬದ ಯೋಗಕ್ಷೇಮವನ್ನು ಕೃಷ್ಣೇಗೌಡರವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಕೇಶವಮೂರ್ತಿ ಕುಟುಂಬದ ಯೋಗಕ್ಷೇಮವನ್ನು ಕೇಶವಮೂರ್ತಿಯವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ತಂದೆ ಹಾಗೂ ದೊಡ್ಡಪ್ಪಂದಿರು ಅವರ ಕುಟುಂಬದೊಂದಿಗೆ ಸುಮಾರು 29 ವರ್ಷಗಳಿಂದ ಪ್ರತ್ಯೇಕವಾಗಿ ವಾಸ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿ.

2 ನೇ ಪ್ರತಿವಾದಿ ನಂಜಮ್ಮ ಅವರು ನನ್ನ ತಾಯಿಯ ತಾಯಿ. ನಂಜಮ್ಮನವರ ವಿವಾಹವನ್ನು ನನ್ನ ತಾತ ಬೊಮ್ಮೆಗೌಡರವರು ಬದುಕಿದ್ದಾಗಲೇ ನೆರವೇರಿಸಿರುತ್ತಾರೆ ಎಂದರೆ ಸರಿ. ನಂಜಮ್ಮ ಅವರಿಗೆ ವಿವಾಹವಾಗಿ ಎಷ್ಟು ವರ್ಷಗಳಾಗಿರುತ್ತವೆ ಎಂದು ನನಗೆ ಗೊತ್ತಿಲ್ಲ. ನಂಜಮ್ಮ ಅವರಿಗೆ ವಿವಾಹವಾಗಿ ಸುಮಾರು 50 ವರ್ಷಗಳಾಗಿರಬಹುದು ಎಂದರೆ ನನಗೆ ಗೊತ್ತಿಲ್ಲ. ಮದುವೆಯಾದಾಗಿನಿಂದಲೂ ನಂಜಮ್ಮ ಅವರು ಅವರ ಗಂಡನ ಮನೆಯಲ್ಲಿ ವಾಸ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ಹಬ್ಬಹರಿದಿನಗಳಲ್ಲಿ ನಂಜಮ್ಮ ಅವರು ನನ್ನ ತಂದೆಯ ಮನೆಗೆ ಮತ್ತು ನನ್ನ ದೊಡ್ಡಪ್ಪಂದಿರ ಮನೆಗೆ ಬಂದು ಹೋಗುತ್ತಿದ್ದರು ಎಂದರೆ ಸರಿ. ನನ್ನ ತಂದೆ ಹಾಗೂ ನನ್ನ ದೊಡ್ಡಪ್ಪಂದಿರು ನಂಜಮ್ಮ ಅವರಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಗೌರಿ ಹಬ್ಬದ ಸಮಯದಲ್ಲಿ ಬಾಗೀನ ಕೊಡುತ್ತಿದ್ದರು ಎಂದರೆ ಸರಿ. ದಾವಾಸ್ತಿಗಳನ್ನು ನನ್ನ ದೊಡ್ಡಂಪದಿರು ಪ್ರತ್ಯೇಕವಾಗಿ ಅನುಭವಿಸಿಕೊಂಡು ಬರುತ್ತಿದ್ದರು ಎಂದರೆ ಸರಿ, ಸಾಕ್ಷಿ ಮುಂದುವರೆದು ನಮ್ಮ ಆಸ್ತಿಯನ್ನೂ ಸಹ ಅವರೇ ಅನುಭವಿಸಿಕೊಂಡು ಬರುತ್ತಿದ್ದಾರೆ. ನನ್ನ ದೊಡ್ಡಪ್ಪಂದಿರು ದಾವಾಸ್ತಿಯನ್ನು ಸುಮಾರು 29 ವರ್ಷಗಳಿಂದ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಈವರೆಗೆ ನಮ್ಮ ಮಧ್ಯೆ ಯಾವುದೇ ಹಿಸ್ಸೆ ಆಗಿರುವುದಿಲ್ಲ

ಓ ಎಸ್ ನಂ. 162/2018

ಪಿ ಡಬ್ಲ್ಯೂ-2

ಎನ್ನುತ್ತಾರೆ.

ನನ್ನ ತಂದೆ ಮತ್ತು ನನ್ನ ದೊಡ್ಡಪ್ಪಂದಿರು ಮತ್ತು ಅವರ ತಾಯಿ ದಿನಾಂಕ 05.03.1994 ರಂದು ಪಂಚಾಯ್ತಿ ಪಾಲು ಪಟ್ಟಿಯ ಪ್ರಕಾರ ದಾವಾಸ್ತಿಯನ್ನು ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಪಂಚಾಯ್ತಿ ಪಾಲು ಪಟ್ಟಿಯ ಪ್ರಕಾರ ಅವರ ಪಾಲಿಗೆ ಬಂದ ಹಿಸ್ಸೆಗೆ ಪ್ರತ್ಯೇಕ ಖಾತೆ ಮಾಡಿಕೊಂಡು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ಪಂಚಾಯ್ತಿ ಪಾಲು ಪಟ್ಟಿಯ ಪ್ರಕಾರ ನನ್ನ ತಂದೆಯ ಪಾಲಿಗೆ ಬಂದ ಆಸ್ತಿಯನ್ನು ನನ್ನ ತಂದೆ ಜೀವಂತವಿರುವವರೆಗೆ ನನ್ನ ತಂದೆ ಮತ್ತು ನಾವು ಒಟ್ಟಾಗಿ ಹಾಗೂ ನನ್ನ ತಂದೆ ಮೃತ ಪಟ್ಟ ನಂತರ ನನ್ನ ತಾಯಿ ಮತ್ತು ನಾವು ಪ್ರತ್ಯೇಕವಾಗಿ ಅನುಭವಿಸಿಕೊಂಡು ಬರುತ್ತಿದ್ದೇವೆಂದರೆ ಸರಿಯಲ್ಲ.

ನನ್ನ ಮದುವೆ ದಿನಾಂಕ 15.08.2015 ರಂದು ಆಗಿರುತ್ತದೆ. 2 ನೇ ವಾದಿಯ ವಿವಾಹವು 2018 ರಲ್ಲಿ ನಡೆದಿರುತ್ತದೆ. ನಮ್ಮ ಮದುವೆಯ ಖರ್ಚು ವೆಚ್ಚವನ್ನು ನನ್ನ ತಾಯಿಯೇ ಭರಿಸಿರುತ್ತಾರೆ. ನನ್ನ ತಂದೆಯ ಪಾಲಿಗೆ ಬಂದ ಆಸ್ತಿಯ ವರಮಾನದಿಂದ ನಮ್ಮ ಮದುವೆಯ ಖರ್ಚನ್ನು ಭರಿಸಿರುತ್ತಾರೆ ಎಂದರೆ ಸರಿಯಲ್ಲ. 1994 ರಲ್ಲಿ ಪಂಚಾಯ್ತಿ ಪಾಲು ಪಟ್ಟಿ ಆಗಿದ್ದರೂ ಸಹ ನನ್ನ ದೊಡ್ಡಪ್ಪಂದಿರು ಅವರ ಪಾಲಿಗೆ ಬಂದ ಹಿಸ್ಸೆ ಆಸ್ತಿಯನ್ನು ಅಭಿವೃದ್ಧಿ ಪಡಿಸಿರುವುದರಿಂದ ಹಾಗೂ ಅಭಿವೃದ್ದಿಪಡಿಸಿರುವುದನ್ನು ಸಹಿಸಲಾಗದೇ ಸದರಿ ಆಸ್ತಿಯಲ್ಲಿ ಹಿಸ್ಸಾ ಪಡೆಯಬೇಕು ಎಂಬ ದುರುದ್ದೇಶದಿಂದ ಹಿಸ್ಸೆ ಆಗಿರುವ ಸಂಗತಿಯನ್ನು ಮರೆಮಾಚಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಸಾಕ್ಷಿಗೆ ನಿ ಪಿ 2 ನ್ನು ತೋರಿಸಲಾಗಿ ದಾವಾಸ್ತಿಯ ಐಟಂ ನಂಬರ್ 1 ಪ್ರತಿವಾದಿ ಸಂಖ್ಯೆ 3 ರವರ ಹೆಸರಿನಲ್ಲಿದೆ ಎಂದರೆ ಸರಿ. 3 ನೇ ಪ್ರತಿವಾದಿಗೆ ದಾಖಲಾತಿಗಳನ್ನು ಪರಿಶೀಲಿಸಿ ಬ್ಯಾಂಕ್ ನಿಂದ ನಿ ಪಿ 2 ರ ಆಧಾರದ ಮೇಲೆ ಸಾಲ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿಯ ಹೆಸರಿನಲ್ಲಿ ದಾವಾಸ್ತಿ ಇರುವುದರಿಂದ ಅವರನ್ನು ದಾವೆಯ ಪಕ್ಷಗಾರರನ್ನಾಗಿ ಮಾಡಿರುತ್ತೇವೆ. ದಾವಾಸ್ತಿಯ ಪೈಕಿ ಯಾವ ಐಟಂ ನ ಖಾತೆಯು 4 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎನ್ನುವುದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಹಿಸ್ಸಾ ಬಾಬ್ತು ಸ್ವತ್ತನ್ನು ತನ್ನ ಹೆಂಡತಿ 4 ನೇ ಪ್ರತಿವಾದಿಯ ಹೆಸರಿಗೆ ಖಾತಾ ಬದಲಾವಣೆ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯ ಹೆಸರಿಗೆ ಯಾವ ರೀತಿ ಖಾತಾ ಬದಲಾವಣೆಯಾಗಿದೆ ಎಂದು ನಾನು ದಾಖಲಾತಿಯನ್ನು ನೋಡಿಲ್ಲ. 1 ನೇ ಪ್ರತಿವಾದಿಯ ಹಿಸ್ಸಾ ಬಾಬ್ತು ಸ್ವತ್ತನ್ನು 4 ನೇ ಪ್ರತಿವಾದಿಯ ಹೆಸರಿಗೆ ಖಾತಾ ಬದಲಾವಣೆ ಮಾಡಿಕೊಂಡಿರುವ ವಿಷಯವು ನನಗೆ ಗೊತ್ತಿದ್ದರೂ ಸಹ ಇಲ್ಲವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ದಾವಾಸ್ತಿಯ ಐಟಂ ನಂಬರ್ 3 ನೇ ಸ್ವತ್ತು 1 ಮತ್ತು 4 ನೇ ಪ್ರತಿವಾದಿಯ ಹೆಸರಿನಲ್ಲಿ ಜಂಟಿ

ಖಾತೆಯಿದೆ ಎಂದರೆ ಸರಿ. ನಿ ಪಿ 4 ರಲ್ಲಿ ದಾವಾಸ್ತಿ ಐಟಂ ನಂಬರ್ 1ರ ಆಸ್ತಿಯು 4 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿ. ಪಂಚಾಯಿತ್ತಿ ಪಾಲು ಪಟ್ಟಿ ಪ್ರಕಾರ ನನ್ನ ದೊಡ್ಡಪ್ಪಂದಿರ ಹೆಸರಿಗೆ ಪ್ರತ್ಯೇಕ ಖಾತೆಯಾಗಿರುವ ವಿಷಯ ಗೊತ್ತಿದ್ದರೂ ಸಹ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.

**(ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ.ಹೇ.ಸ.ಇ.ಎ.ಒ.,

ಸಹಿ/-

**3 ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.**
ಚನ್ನರಾಯಪಟ್ಟಣ.